ಮಾತನ್ನೂ ಆಡುತ್ತಿರಲಿಲ್ಲ. ಸಣ್ಣ ಹೆಣ್ಣು ಮಕ್ಕಳನ್ನು ಕಂಡರಂತೂ ಜೀವ ಬಿಡುತ್ತಿದ್ದಳು. 'ನನ್ನ ಮಗಳು ಹೀಗೇ ಇದ್ದಳು' ಎನ್ನುತ್ತ ಆರೈಕೆ ಮಾಡುತ್ತಿದ್ದಳು. ಈ ಎಲ್ಲ ನೆನಪುಗಳು ಶಾರದೆಗೆ ಹಸಿ ಹಸಿಯಾಗಿಯೇ ಇದ್ದವು. ಹಾಗಂತ ಶಾರದೆಗೆ ಭಾಗೀಚಿಕ್ಕಿಯ ಮೇಲೆ ಅತೀವ ಪ್ರೀತಿ ಕಾಳಜಿ ಇತ್ತು ಎಂದೇನೂ ಅಲ್ಲ. ಸರ್ಕಾರಿ ಆಸ್ಪತ್ರೆಯಲ್ಲಿ ಶುಶ್ರೂಷಕಿಯಾಗಿ ನೈಟು ಡ್ಯೂಟಿ, ಡೇ ಡ್ಯೂಟಿಗಳ ರಗಳೆಯಲ್ಲಿ ಆಕೆ ಹೈರಾಣಾಗಿ ಹೋಗಿದ್ದಳು. ಅತ್ತೆ ಇರುವ ತನಕ ಯಾವೊಂದು ತಲೆಬಿಸಿಯೂ ಇರದಿದ್ದ ಆಕೆಗೆ ಅತ್ತೆಯ ಸಾವಿನ ನಂತರ ಮನೆಯ ಅಷ್ಟೂ ಜವಾಬ್ದಾರಿ ಹೆಗಲೇರಿ ಬಿಟ್ಟಿತ್ತು. ತಲೆಬಿಸಿ ಕೆಲಸ ಕಾರ್ಯಕ್ಕೆ ಸೀಮಿತವಾಗಲಿಲ್ಲ. ಪುಟ್ಟ ಮಗಳು ದಿನದಿನಕ್ಕೂ ಬೆಳೆಯುತ್ತಿದ್ದಳು. ಅವಳ ಲಂಗಗಳು ಗಿಡ್ಡ ಆದಂತೆಲ್ಲ ಶಾರದೆಯ ದಿಗಿಲು ಹೆಚ್ಚಾಗುತ್ತಿತ್ತು. ದಸರಾ ರಜೆ, ಭಾನುವಾರದ ರಜೆ, ಬೇಸಿಗೆ ರಜೆ ಎಂದು ಮಗಳು ಮನೆಯಲ್ಲಿ ಉಳಿದುಕೊಂಡರಂತೂ ಆತಂಕ ಮುಗಿಲು ಮುಟ್ಟುತ್ತಿತ್ತು. ಆಸ್ಪತ್ರೆಗೆ ಹೋದ ಮೇಲೆಯೂ ಕೂಡ ಆಕೆಗೆ ಮನೆಯದ್ದೇ ಚಿಂತೆ ಹಿಡಿದು ದಿನಕ್ಕೊಬ್ಬ ಪೇಶಂಟಿನ ಹತ್ತಿರ ಬೈಸಿಕೊಳ್ಳುವಂತಾಗುತ್ತಿತ್ತು. ಇನ್ನು ಅಸ್ತಮಾದಿಂದ ನರಳುವ ಮಾವ ಮನೆಯಲ್ಲಿ ಇರುತ್ತಿದ್ದರೂ ಮೊಮ್ಮಗಳ ಮೇಲಿನ

